

ಹುಟ್ಟುಹಾಕಿತ್ತು. ಯಂತ್ರವೊಂದು ಮಾನವನ ಅತ್ಯಂತ ಖಾಸಗಿ ಅಗತ್ಯಗಳನ್ನು ಪೂರೈಸುವ ವಿಷಯ ದಶಕದ ಹಿಂದೆ ಸ್ವಾಗತಾರ್ಹ ವಿಷಯವಾಗಿರಲಿಲ್ಲ.

## ಎಐ ವೈಫ್ಸ್ ಅಂಡ್ ಹಸ್ಬೆಂಡ್ಸ್

ಯಾಂತ್ರಿಕ ಬುದ್ಧಿಮತ್ತೆಯು ಸೃಷ್ಟಿಸುವ ಆತ್ಮಸಖಿಯರನ್ನು 'ಎಐ ವೈಫ್ಸ್' (ಎಐ ಹೆಂಡತಿಯರು) ಮತ್ತು ಆತ್ಮಸಖರನ್ನು 'ಎಐ ಹಸ್ಬೆಂಡ್ಸ್' (ಎಐ ಗಂಡಂದಿರು) ಎಂದು ನಾಮಕರಣ ಮಾಡಲಾಗಿದೆ. ಇವು ನಿಜ ಜೀವನದ ನೈಜ ಸಂಗಾತಿಗಳಿಗಿಂತ ಹೆಚ್ಚು ಆಪ್ಯಾಯಮಾನ. ಸುಲಭ ಬೆಲೆಯಲ್ಲಿ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ದೊರಕುತ್ತಿವೆ. ನೈಜ ಜೀವನದ ಸಂಗಾತಿಗಳಿಗಿಂತ ಹೆಚ್ಚು ಆಪ್ತವಾಗಿ ಬಳಕೆದಾರರಿಗೆ ಹತ್ತಿರವಾಗುತ್ತಿವೆ. ಕಳೆದ ಡಿಸೆಂಬರ್ ವೇಳೆಗೆ ಆ್ಯಂಡ್ರಾಯ್ಡ್ ಮತ್ತು ಐಓಎಸ್ ಫೋನ್‌ಗಳಲ್ಲಿ ಡೌನ್‌ಲೋಡ್ ಮಾಡಿಕೊಳ್ಳಲಾದ ವಿವಿಧ 30 ಆ್ಯಪ್‌ಗಳ ಪೈಕಿ ಅರ್ಧಕ್ಕರ್ಧ ಆ್ಯಪ್‌ಗಳು ಎಐ ಗೆಳತಿಯರಿಗೆ ಸಂಬಂಧಿಸಿದ್ದವು. ಅಮೆರಿಕದ ಯುವಕ ಯುವತಿಯರ ಪಾಲಿನ ಹಾಟ್ ಫೇವರೆಟ್ ಎನಿಸಿರುವ ಎಐ ಸಖಿಯರು ತಮ್ಮನ್ನು ನಿರ್ಮಿಸಿದ ಕಂಪನಿಗಳಿಗೆ ಭಾರೀ ದೊಡ್ಡ ಆರ್ಥಿಕ ವ್ಯವಹಾರ ಕುದುರಿಸುತ್ತಿದ್ದಾರೆ. ಎಐ ಚಾಟ್ ಬಾಟ್‌ಗಳ ನಿರ್ಮಾಣಕ್ಕೆ ಹೆಚ್ಚಿನ ಬಂಡವಾಳ ಸಮಯ ಹೂಡುತ್ತಿರುವ ನವೋದ್ಯಮಗಳು ಯಾಂತ್ರಿಕ ಬುದ್ಧಿಮತ್ತೆಯನ್ನು ಸಮರ್ಥವಾಗಿ ಉಪಯೋಗಿಸಿಕೊಳ್ಳಬಲ್ಲ ಸುಂದರವಾದ ಲೈಂಗಿಕ ಆಟಿಕೆ, ಗೊಂಬೆ ಮತ್ತು ರೋಬಾಟುಗಳನ್ನು ಮಾರುಕಟ್ಟೆಗೆ ತಂದಿವೆ, ತರುತ್ತಿವೆ.

ಬಳಕೆದಾರರ ಆಸಕ್ತಿ ಮತ್ತು ಅಗತ್ಯಕ್ಕೆ ತಕ್ಕಂತಹ ಎಐ ಗೆಳತಿಯರನ್ನು ನಿರ್ಮಿಸಿಕೊಳ್ಳುವ ಅವಕಾಶವನ್ನು ಜನರಿಗೇ ನೀಡಲಾಗುತ್ತಿದೆ. ಅಮೆರಿಕ ಮೂಲದ 'ರಿಯಲ್‌ಬಾಟಿಕ್ಸ್' ಎಂಬ ಕಂಪನಿ ಐದು ಸಾವಿರ ಡಾಲರ್ ವೆಚ್ಚದಲ್ಲಿ ಬಳಕೆದಾರರು ತಮಗೆ ಸರಿಹೊಂದುವ ಸಂಗಾತಿಗಳನ್ನು ತಮಗೆ ಬೇಕಾದಂತೆ ನಿರ್ಮಿಸಿಕೊಳ್ಳುವ ಅವಕಾಶ ಕಲ್ಪಿಸಿಕೊಟ್ಟಿದೆ. ಲೈಂಗಿಕ ರೋಬಾಟುಗಳನ್ನು ಸೃಷ್ಟಿಸುವ 'ಅಬಿಸ್ ಕ್ರಿಯೇಶನ್ಸ್' ಕಂಪನಿಯು, ರಿಯಲ್‌ಬಾಟಿಕ್ಸ್ ಕಂಪನಿಯವರು ಗಳಿಸುತ್ತಿರುವ ಹಣ–ಜನಪ್ರಿಯತೆಯನ್ನು ಕಂಡು ಕಂಗಾಲಾಗಿದೆ. ಇಡೀ ವಿಶ್ವದಲ್ಲೇ 'ಸೆಕ್ಸ್‌ಬಾಟ್' ತಯಾರಿಕೆಯಲ್ಲಿ ಮುಂಚೂಣಿಯಲ್ಲಿರುವ ಅಬಿಸ್, ಎಐ ಪ್ರವೇಶದಿಂದಾಗಿ ಸೆಕ್ಸ್‌ಬಾಟ್ ತಯಾರಿಕಾ ಮಾರುಕಟ್ಟೆಯು ಅಗಾಧವಾಗಿ ಬದಲಾಗುತ್ತಿದೆ

### ತೆರೆದ ಕೊಳವೆ ಬಾವಿ!

ಎಐ ಆ್ಯಪ್‌ಗಳ ಜೊತೆ ಡೇಟಿಂಗ್ ನಡೆಸುವ ಬಳಕೆದಾರರು ತಮ್ಮ ಜೀವನದ ಅತ್ಯಂತ ಗೌಪ್ಯ ವಿಚಾರಗಳನ್ನು ಅದರ ಜೊತೆ ಹಂಚಿಕೊಳ್ಳುತ್ತಾರೆ. ತಾವು ಚಿಕ್ಕವರಿದ್ದಾಗ ಲೈಂಗಿಕ ಶೋಷಣೆಗೆ ಒಳಗಾದದ್ದು, ತಾವೇ ಇನ್ನೊಬ್ಬರನ್ನು ತಪ್ಪಾಗಿ ಬಳಸಿಕೊಂಡದ್ದು, ಅಸ್ವಾಭಾವಿಕ ಲೈಂಗಿಕ ಆಕರ್ಷಣೆ, ತಂದೆ–ತಾಯಿಯರ ಅನೈತಿಕ ಕೆಲಸ, ಆತ್ಮಹತ್ಯೆಯ ಪ್ರಯತ್ನ, ಕದ್ದು ನೋಡುವ ಚಟ, ಸಂಬಂಧಿಕರೊಂದಿಗೆ ನಡೆಸಿದ ವಂಚನೆಯ ಕೆಲಸ– ಹೀಗೆ ಯಾರೊಂದಿಗೂ ಹೇಳಿಕೊಂಡಿರದ ವಿಚಾರಗಳನ್ನೆಲ್ಲ ಡೇಟಿಂಗ್ ಆ್ಯಪ್‌ಗಳಿಗೆ ಹೇಳಿಕೊಳ್ಳುವ ಜನ, ಕಾಣದ ಕಣ್ಣಿನ ಮುಂದೆ ಸಂಪೂರ್ಣ ಬೆತ್ತಲಾಗಿಬಿಡುತ್ತಾರೆ. ಆಕಸ್ಮಾತ್ತಾಗಿ ಈ ದತ್ತಾಂಶವು ಬೇರೆಯವರ, ವಿಧ್ವಂಸಕರ ಕೈವಶವಾದರೆ ಮಾಹಿತಿ ಹಂಚಿಕೊಂಡವರ ಗತಿಯೇನು?